

ಎಂ.ಎಸ್. ಶ್ರೀರಾಮ್

ನೋಟುಗಳನ್ನು ಸೃಷ್ಟಿಸುತ್ತಿದ್ದವನು ಅಧಿಕಾರಕ್ಕೆ ಬಂದನಂತರ ಉಲ್ಟಾ ಹೊಡೆದು ಇದ್ದ ರೂಪಾಯಿ ನೋಟುಗಳನ್ನು ಗಾಳಿಯಲ್ಲಿ ತೇಲಿಹೋಗುವಂತೆ ಮಾಡುತ್ತಿದ್ದ.

ಜಾದೂಗಾರನ ಜಾದೂವಿನಲ್ಲಿ ಬೇಸರ ಹುಟ್ಟಿದಾಗ ಜನತೆ ಮಾಂತ್ರಿಕನನ್ನು ತಂದು ಕೂಡ್ರಿಸುತ್ತಿದ್ದರು. ಮಾಂತ್ರಿಕನೆಂದರೆ ನಮಗೆಲ್ಲಾ ತಿಳಿದೇ ಇದೆ. ಅವನು ಮಂತ್ರೋಚ್ಚಾರಣೆ ಮಾಡಿ ದೇವರನ್ನು ಆವಾಹಿಸುತ್ತಿದ್ದ. ಎಲ್ಲ ಸಮಸ್ಯೆಗಳಿಗೂ ಒಂದು ಮಂತ್ರವನ್ನುಚ್ಚರಿಸಿ, ಒಂದು ಹವನವನ್ನು ಮಾಡಿ ಕೈಮುಗಿಸುತ್ತಿದ್ದ. ಯಾವುದೇ ಪ್ರಶ್ನೆಯಾದರೂ ಮೇಲೆ ದೇವರತ್ತ ಜನರು ನೋಡಬೇಕಿತ್ತು. ಅವನ ಮಂತ್ರಗಳೂ ಜಾದೂವಿನ ಹಾಗೇ. ಒಮ್ಮೊಮ್ಮೆ ಕೆಲಸ ಮಾಡುತ್ತಿತ್ತು. ಒಮ್ಮೊಮ್ಮೆ ಇಲ್ಲ. ಕೆಲಸ ಮಾಡಿದ್ದಕ್ಕೆ ನಂಬಿಕೆಯೇ ಕಾರಣ, ಮಂತ್ರವೇ ಕಾರಣ ಎನ್ನುವ ನಂಬಿಕೆಯನ್ನು ಮಾಂತ್ರಿಕ ಹುಟ್ಟಿಸುತ್ತಿದ್ದ. ಕೆಲಸಮಾಡದಿದ್ದರೆ ಅದು ಪೂರ್ವಜನ್ಮದ ಪಾಪದ ಫಲವಾಗುತ್ತಿತ್ತು. ಅವನ ಮಂತ್ರಗಳ ಶಕ್ತಿ ಕುಂದಿದಾಗ ಮತ್ತೆ ಜನ ಜಾದೂಗಾರನ ಮೊರೆ ಹೋಗುತ್ತಿದ್ದರು.

ಹೀಗಿರುತ್ತಿರಲು ಮೂರನೆಯನು ಉದ್ಭವಿಸಿದ. ಅವನು ಪ್ರವಾದಿ. ಜಾದೂ ಕಣ್ಕಟ್ಟು, ಮಂತ್ರ ಮೂಢನಂಬಿಕೆ ಏಳು ದಶಕಗಳಿಂದ ಇದನ್ನೆಲ್ಲಾ ನಂಬಿ ಬಂದಿದ್ದೀರಲ್ಲಾ ಮೂರ್ಖರೇ ಎಂದು ಜನರನ್ನು ಬೈದ. ಮುಂದೆ ಒಳ್ಳೆಯ ದಿನಗಳು ಬರಲಿವೆ ಎಂದ. ಜನರಿಗೆ ಈ ಹೊಸ ಪ್ರಯೋಗ ಹಿಡಿಸಿತು. ಇಲ್ಲೊಂದು ಆಶಾಕಿರಣ ಕಂಡಿತು. ಆದರೇನು ಮಾಡುವುದು ಸಮಸ್ಯೆ ಜಟಿಲವಾಗಿತ್ತು.

ಪ್ರವಾದಿಯು ಮೊದಲು ಜಾದೂಗಾರನ ಮೋಡಿಯನ್ನು ತೋರಿಸಿ ಮಂತ್ರೋಚ್ಚಾರಣೆ ಮಾಡುವವರನ್ನು ಬೈದ. ಇಲ್ಲಿ ನೋಡಿ ಹೊಸಾ ಜಾದೂ ಎಂದು ದುಡ್ಡನ್ನೇ ಗಾಯಬ್ ಮಾಡಿದ. ಜಾದೂಗಾರನು ಬೆನ್ನ ಹಿಂದೆ ಮಾಡುತ್ತಿದ್ದ ಕೆಲಸವನ್ನು ಎದುರಿಗೇ, ಎದೆ ತಟ್ಟಿಕೊಳ್ಳುತ್ತಲೇ ಮಾಡಿದ. ಜನರು ಇಂಥ ಧೈರ್ಯವನ್ನು ಎಂದೂ ನೋಡಿರಲಿಲ್ಲ. ವಾಹ್ ಎಷ್ಟು ಕ್ರಾಂತಿಕಾರಿ ನಾಯಕ ಎಂದು ಕಕ್ಕಾಬಿಕ್ಕಿಯಾಗಿದ್ದರು.

ನಂತರ ಮಂತ್ರೋಚ್ಚಾರಣೆಯನ್ನೂ ಮಾಡಿದ. ಆದರೆ ಅದಕ್ಕೊಂದು ಹೊಸ ಹೆಸರು ಕೊಟ್ಟ. ರಾಗಪ್ರಾರ್ಥನೆ. ದೇಶಭಕ್ತಿಯನ್ನು ತೋರುವ ರಾಗಪ್ರಾರ್ಥನೆಯೆಂದ. ಜನರೂ ಮಂತ್ರವನ್ನ ಉಚ್ಚರಿಸುತ್ತಾ ಮಾಂತ್ರಿಕನನ್ನು ಬೈದರು. ಜಾದೂಗಾರನನ್ನೂ ಬೈದರು. ಬೈಬೈಯ್ಯುತ್ತಾ ದೇಶವೇ ಬೈಗಳಮಯವಾಯಿತು. ಹಿಂದಿನದ್ದೆಲ್ಲಾ ತಪ್ಪು ಎನ್ನಿಸಿತು. ನವನಿರ್ಮಾಣವಾಗುತ್ತಿದೆ ಎನ್ನಿಸಿತು. ರಾಗಪ್ರಾರ್ಥನೆಯ ಲಾಲಿಯಲ್ಲಿ ಎಲ್ಲರೂ ಭವ್ಯಕನಸುಗಳನ್ನು ಕಾಣುತ್ತಾ ಮಂಪರಿಗೆ ಬಿದ್ದರು. ಆದರೆ ಮಂಪರು ಎಷ್ಟುದಿನ ತಾನೇ ಇದ್ದೀತು. ಮಂಪರಿನಿಂದ ಎಚ್ಚರವಾದಾಗ ಏನೂ ಬದಲಾಗಿರಲಿಲ್ಲ. ಎಚ್ಚರ. ಜಾದೂಗಾರನೆದುರು ಎಚ್ಚರ. ಮಾಂತ್ರಿಕನೆದುರು ಎಚ್ಚರ. ಪ್ರವಾದಿಯ ಮುಂದೆ ಎಚ್ಚರ.

---

ಕತೆಗಾರ, ಪ್ರಬಂಧಕಾರ, ಅರ್ಥತಜ್ಞ ಶ್ರೀರಾಮ್ ಬೆಂಗಳೂರಿನವರು. 'ಶನಿವಾರ ಸಂತೆ', 'ಕನಸು ಕಟ್ಟುವ ಕಾಲ', 'ತೇಲ್ ಮಾಲಿಶ್', 'ಅವರವರ ಸತ್ಯ', 'ಮಾಯಾದರ್ಪಣ', 'ಸಲ್ಮಾನ್ ಖಾನ್‌ನ ಡಿಫಿಕಲ್ಟೀಸು' ಅವರ ಪ್ರಮುಖ ಪುಸ್ತಕಗಳು.